

بسم اللہِ الرّحمٰن الرّحیم

# ಪ್ರವಾದಿ ಚರಿತ್ರೆ – ಖಂದಕ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–11–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಬನೂ ಖುರೈಝ಼ಾ ಯುದ್ಧದ ಇನ್ನಷ್ಟು ವಿವರಣೆ ಹೀಗಿದೆ: ಹಝ್ರತ್ ಖಲ್ಲಾದ್ ಬಿನ್ ಸುವೈದ್(ರ) ಮತ್ತು ಹಝ್ರತ್ ಮುಂಧಿರ್ ಬಿನ್ ಮುಹಮ್ಮದ್(ರ) ಎಂಬೀ ಇಬ್ಬರು ಮುಸ್ಲಿಮರು ಈ ಯುದ್ಧದಲ್ಲಿ ಹುತಾತ್ಮರಾದರು. ಆದರೆ ಬನೂ ಖುರೈಝ಼ಾದ ಎಷ್ಟು ಯಹೂದಿಯರು ಕೊಲ್ಲಲ್ಪಟ್ಟರು ಎಂಬುವುದರಲ್ಲಿ ಭಿನ್ನಾಭಿಪ್ರಾಯವಿದೆ. ಆರುನೂರರಿಂದ ಒಂಬೈನೂರರಷ್ಟು ಎಂದು ವಿವಿಧ ವರದಿಗಳಲ್ಲಿ ಬಂದಿದೆ. ಆದರೆ ಆ ದಿನ ಸಅದ್(ರ)ರ ತೀರ್ಪು ಪ್ರಕಾರ ಸುಮಾರು ನಾನ್ನೂರು ಜನರನ್ನು ವಧಿಸಲಾಯಿತು ಎಂದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ತನ್ನ ಶೋಧನೆಯ ಪ್ರಕಾರ ಬರೆದಿರುವರು. ಹಝ್ರತ್ ಪೈಗಂಬರ್(ಸ)ರು ಸಹಾಬಿಯರಿಗೆ ಆದೇಶ ನೀಡಿ ಅವರ ಮೇಲ್ನೋಟದಲ್ಲೇ ಆ ಕೊಲ್ಲಲ್ಪಟ್ಟವರನ್ನು ಹೂಳಲಾಯಿತು. ಇಸ್ಲಾಮಿನ ವಿರೋಧಿಗಳು ಕೊಲ್ಲಲ್ಪಟ್ಟವರ ಸಂಖ್ಯೆಯನ್ನು ಅತಿಶಯೋಕ್ತಿಯಾಗಿ ಬಹಳ ಹೆಚ್ಚು ಮಾಡಿ ಇಸ್ಲಾಮ್ ದೌರ್ಜನ್ಯಕರ ಧರ್ಮವೆಂದು ಸ್ಥಾಪಿಸಲು ಪ್ರಯತ್ನಿಸುತ್ತಾರೆ.

ಈ ಕಾಲದಲ್ಲಿ ಒಬ್ಬ ಅಹ್ಮದೀ ಸ್ಕಾಲರ್ ಸಯ್ಯದ್ ಬರಕಾತ್ ಸಾಹಿಬ್ ಬಹಳಷ್ಟು ಸಂಶೋಧನೆ ನಡೆಸಿ ತನ್ನ ಪುಸ್ತಕವಾದ **"ರಸೂಲ್ ಅಕ್ರಮ್(ಸ) ಮತ್ತು ಯಹೂದ್ ಹಿಜಾಝ್"**ನಲ್ಲಿ ಹೀಗೆ ಬರೆದಿರುವರು: ಕಣ್ಣು ಮುಚ್ಚಿ ಎಲ್ಲ ವರದಿಗಳನ್ನು ಒಪ್ಪುತ್ತಾ ಹೋಗುವುದು ಬುದ್ಧಿವಂತಿಕೆಯಲ್ಲ. ಅತಿಶಯೋಕ್ತಿಯಿಂದ ವರದಿಯಾಗಿದೆಯೇ ಎಂದು ಆ ವರದಿಗಳ ಬಗ್ಗೆ ಪುನರಾಲೋಚನೆ ನಡೆಸಬೇಕಾಗಿದೆ. ಅವರ ಸಂಶೋಧನೆ ಪ್ರಕಾರ ಬನೂ ಖುರೈಝ಼ಾ ಯುದ್ಧದಲ್ಲಿ ಕೊಲ್ಲಲ್ಪಟ್ಟ ಯಹೂದಿಯರ ಸಂಖ್ಯೆ ಇಪ್ಪತ್ತಕ್ಕಿಂತ ಹೆಚ್ಚೇನಿಲ್ಲ. ಅವರು ಇದನ್ನು ಇನ್ನಷ್ಟು ಕಡಿಮೆಗೊಳಿಸಿರುವರು. ಇದು ಎಷ್ಟರ ಮಟ್ಟಿಗೆ ಸರಿಯೆಂದು ಗೊತ್ತಾಗುತ್ತಿಲ್ಲ. ಆದರೂ ಅವರ ಕೆಲವು ಮಾತುಗಳು ವಿವೇಕಯುತವಾಗಿವೆ. ಅವುಗಳನ್ನು ಸಂಶೋಧನೆಗೆ ಅವಲಂಬಿಸಬಹುದಾಗಿದೆ.

ಬನೂ ಖುರೈಝ಼ಾ ಯುದ್ಧದಲ್ಲಿ ಕೊಲ್ಲಲ್ಪಟ್ಟ ಯಹೂದಿಯರ ಸಂಖ್ಯೆಯ ಬಗ್ಗೆ ಮುಸ್ಲಿಮೇತರರು ಮಾಡುವ ಆಕ್ಷೇಪಗಳಿಗೆ ಉತ್ತರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೇಳುತ್ತಾರೆ: ಬನೂ ಖುರೈಝ಼ಾದ ಘಟನೆಯ ಕುರಿತು ಮುಸ್ಲಿಮೇತರರಾದ ಕೆಲವು ಚರಿತ್ರೆಗಾರರು ಬಹಳ ಅಸಹನೀಯವಾದ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ)ರ ಮೇಲೆ ಹಲ್ಲೆ ನಡೆಸಿರುವರು. ಸುಮಾರು ನಾನ್ನೂರು ಯಹೂದಿಯರ ವಧೆಶಿಕ್ಷೆಯ ಕಾರಣದಿಂದ ಹಝ್ರತ್ ಪೈಗಂಬರ್(ಸ)ರನ್ನು ಒಬ್ಬ ದುಷ್ಟ ಮತ್ತು ರಕ್ತಪಿಪಾಸು ಅಧಿಕಾರಿ ಎಂಬ ರೀತಿಯಲ್ಲಿ ವಿವರಿಸುತ್ತಾರೆ – ನಊಧುಬಿಲ್ಲಾಹ್. ಈ ಆಕ್ಷೇಪದ ಬುನಾದಿ ಧಾರ್ಮಿಕ ಹಗೆಯಾಗಿದೆ. ಕೆಲವು ಮುಸ್ಲಿಮರು ಕೂಡ ಅವರ ಪ್ರಭಾವಕ್ಕೆ ಒಳಪಟ್ಟಿದ್ದಾರೆ.

ಈ ಆಕ್ಷೇಪಕ್ಕೆ ಉತ್ತರಿಸುವಾಗ ಮೊತ್ತಮೊದಲಾಗಿ ನೆನಪಿಡಬೇಕಾದ ಸಂಗತಿಯೇನೆಂದರೆ, ಬನೂ ಖುರೈಝ಼ಾದ ಕುರಿತು ದೌರ್ಜನ್ಯಕರವೆಂದು ಹೇಳಲಾಗುವ ತೀರ್ಪು ಸಅದ್ ಬಿನ್ ಮುಆದ್(ರ)ರ ತೀರ್ಪಾಗಿತ್ತು. ಆ ತೀರ್ಪು ಹಝ್ರತ್ ಪೈಗಂಬರ್(ಸ)ರದ್ದು ಆಗಿರಲಿಲ್ಲ ಎಂದಿರುವಾಗ ಆ ಕಾರಣದಿಂದ ಹಝ್ರತ್ ಪೈಗಂಬರ್(ಸ)ರನ್ನು ಆಕ್ಷೇಪಿಸಲು ಸಾಧ್ಯವಲ್ಲ. ಮತ್ತೊಂದು ವಿಷಯ, ಆಗ ಉಂಟಾಗಿದ್ದ ಸ್ಥಿತಿಗತಿಗಳ ಪ್ರಕಾರ ಆ ತೀರ್ಪು ಖಂಡಿತವಾಗಿಯೂ ತಪ್ಪು ಮತ್ತು ದೌರ್ಜನ್ಯಕರವಾಗಿರಲಿಲ್ಲ. ಮೂರನೇ ಸಂಗತಿಯೇನೆಂದರೆ, ತೀರ್ಪನ್ನು ಹೊರಡಿಸುವುದಕ್ಕೆ ಮುಂಚೆ ಹಝ್ರತ್ ಪೈಗಂಬರ್(ಸ)ರಿಂದ ಸಅದ್(ರ) ಪಡೆದ ವಾಗ್ದಾನದ ಕಾರಣದಿಂದ ಆ ವಾಗ್ದಾನವನ್ನು ಹಝ್ರತ್ ಪೈಗಂಬರ್(ಸ) ಪಾಲಿಸಲೇ ಬೇಕಿತ್ತು. ನಾಲ್ಕನೇ ಸಂಗತಿಯೇನೆಂದರೆ, ಅಪರಾಧಿಗಳು ಸ್ವತಃ ಆ ತೀರ್ಪನ್ನು ಸ್ವೀಕಾರ ಮಾಡಿದ್ದರು ಮತ್ತು ಅದರ ಬಗ್ಗೆ ಆಕ್ಷೇಪ ಎತ್ತಿರಲಿಲ್ಲ. ಉದಾಹರಣೆಗೆ, ಹುಯ್ಯ್ ಬಿನ್ ಅಖ್ತಬ್‌ನನ್ನು ವಧಿಸುವ ವೇಳೆ ಆತನು ಹೇಳಿದ ಮಾತಿನಿಂದ ಸ್ಪಷ್ಟವಾಗುವುದೇನೆಂದರೆ, ಆ ತೀರ್ಪನ್ನು ಆತನು ದೈವಿಕ ವಿಧಿಯೆಂದು ಭಾವಿಸಿದನು ಎಂದಾಗಿದೆ. ಹೀಗಿರುವಾಗ ಹಝ್ರತ್ ಪೈಗಂಬರ್(ಸ) ಸುಮ್ಮನೇ ಮಧ್ಯೆ ಪ್ರವೇಶಿಸಲು ಹೋಗುವ ಅಗತ್ಯವೇ ಬರುವುದಿಲ್ಲ.

ಸಅದ್(ರ)ರ ತೀರ್ಪಿನ ನಂತರ ಈ ವಿಷಯದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಇದ್ದ ಸಂಬಂಧ ಏನಾಗಿತ್ತು ಎಂದರೆ, ಹಝ್ರತ್ ಪೈಗಂಬರ್(ಸ) ತನ್ನ ಅಧಿಕಾರದ ಅಧೀನದಲ್ಲಿ ಈ ತೀರ್ಪನ್ನು ಕಾರುಣ್ಯದ ಅತ್ಯುತ್ತಮ ಮಾದರಿ ಎಂಬ ರೀತಿಯಲ್ಲಿ ಜಾರಿಗೊಳಿಸಿದರು ಎಂದು ಮಾತ್ರವಾಗಿತ್ತು. ಆದ್ದರಿಂದ ಬನೂ ಖುರೈಝ಼ಾದ ಘಟನೆಯ ಕುರಿತು ಹಝ್ರತ್ ಪೈಗಂಬರ್(ಸ)ರ ಮೇಲೆ ಕಿಂಚಿತ್ತೂ ಯಾವುದೇ ಆಕ್ಷೇಪ ಉಂಟಾಗುವುದಿಲ್ಲ. ಬದಲಾಗಿ ಸತ್ಯವೇನೆಂದರೆ ಈ ಘಟನೆ ಹಝ್ರತ್ ಪೈಗಂಬರ್(ಸ)ರ ಶ್ರೇಷ್ಠ ನೈತಿಕಗುಣ, ಅತ್ಯುತ್ತಮ ಆಡಳಿತ ವೈಖರಿ ಮತ್ತು ಅವರ ಸಹಜಗುಣವಾದ ಕಾರುಣ್ಯದ ಅತ್ಯಂತ ಸ್ಪಷ್ಟವಾದ ಪುರಾವೆಯಾಗಿದೆ.

ಇನ್ನು ತೀರ್ಪಿನ ನೈಜತೆಯ ಬಗ್ಗೆ ಹೇಳುವುದಾದರೆ, ಚರಿತ್ರೆಯಿಂದ ಗೊತ್ತಾಗುವುದೇನೆಂದರೆ, ಆ ಕಾಲದಲ್ಲಿ ಮದೀನದಲ್ಲಿ ನೆಲೆಸಿದ ಯಹೂದಿಯರ ಮೂರು ಗೋತ್ರಗಳಾದ ಬನೂ

ಖೈನ್‌ಖಾಅ್, ಬನೂ ನಝೀರ್ ಮತ್ತು ಬನೂ ಖುರೈಝ್ದದ ಜೊತೆಗೆ ಶಾಂತಿ ಮತ್ತು ಅಭಯದ ಒಂದು ಒಪ್ಪಂದವನ್ನು ಹಝ್ರತ್ ಪೈಗಂಬರ್(ಸ) ಮಾಡಿದ್ದರು. ಅದರ ಪ್ರಕಾರ ಮುಸ್ಲಿಮರು ಮತ್ತು ಯಹೂದಿಯರು ಶಾಂತಿ ಮತ್ತು ಸುರಕ್ಷೆಯೊಂದಿಗೆ ಮದೀನದಲ್ಲಿ ಇರಬೇಕು, ಪರಸ್ಪರ ಗೆಳೆತನದ ಸಂಬಂಧವನ್ನು ಇರಿಸಬೇಕು, ಪರಸ್ಪರರ ಶತ್ರುಗಳನ್ನು ಯಾವುದೇ ರೀತಿಯಲ್ಲಿ ಸಹಾಯ ಮಾಡಬಾರದು, ಹೊರಗಿನ ಗೋತ್ರಗಳ ಕಡೆಯಿಂದ ಮದೀನದ ಮೇಲೆ ಯಾರಾದರೂ ದಾಳಿ ನಡೆಸಿದರೆ ಎಲ್ಲರೂ ಸೇರಿ ಅವರನ್ನು ಎದುರಿಸಬೇಕು, ಒಪ್ಪಂದ ಮಾಡಿದವರಲ್ಲಿ ಒಬ್ಬ ವ್ಯಕ್ತಿ ಅಥವಾ ಗುಂಪು ಈ ಒಪ್ಪಂದವನ್ನು ಮುರಿದರೆ ಅಥವಾ ಪಿತೂರಿ ಮತ್ತು ಗಲಭೆಗೆ ಕಾರಣವಾದರೆ ಇತರರಿಗೆ ಅದರ ವಿರುದ್ಧ ಕೈಯೆತ್ತಲು ಅಧಿಕಾರವಿರುವುದು. ಎಲ್ಲ ಭಿನ್ನಾಭಿಪ್ರಾಯಗಳು ಮತ್ತು ಜಗಳಗಳು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಇರಿಸಲಾಗುವುದು. ಅವರ ತೀರ್ಪನ್ನು ಪಾಲಿಸುವುದು ಕಡ್ಡಾಯವಾಗಿರುವುದು. ಆದರೆ ಪ್ರತಿಯೊಬ್ಬನು ಅಥವಾ ಪ್ರತಿ ಸಮುದಾಯದ ಕುರಿತು ಅವರದೇ ಧರ್ಮ ಮತ್ತು ಅವರದೇ ಶರೀಅತ್ ಪ್ರಕಾರ ತೀರ್ಪು ನೀಡುವುದು ಅಗತ್ಯವಾಗಿರುವುದು.

ಈ ಒಪ್ಪಂದವನ್ನು ಮೊತ್ತ ಮೊದಲಾಗಿ ಬನೂ ಖೈನ್‌ಖಾಅ್ ಗೋತ್ರ ಮುರಿಯಿತು ಮತ್ತು ಮುಸ್ಲಿಮರ ವಿರುದ್ಧ ಯುದ್ಧ ಮಾಡಿತು. ಆದರೆ ಆ ಗೋತ್ರದವರು ಮುಸ್ಲಿಮರ ಮುಂದೆ ಪರಾಜಿತರಾದಾಗ ಹಝ್ರತ್ ಪೈಗಂಬರ್(ಸ) ಅವರನ್ನು ಕ್ಷಮಿಸಿದರು. ಪಟ್ಟಣದ ಶಾಂತಿಗೆ ಭಂಗ ಉಂಟಾಗದಿರಲು ಮತ್ತು ಮುಸ್ಲಿಮರನ್ನು ಅವರ ಕೆಡುಕಿನಿಂದ ಸುರಕ್ಷಿತಗೊಳಿಸಲು ಅವರನ್ನು ಗಡಿಪಾರು ಮಾಡಿದರೆ ಸಾಕೆಂದು ಮನಗಂಡರು. ಅಲ್ಪ ಕಾಲ ದಾಟುವುದರೊಳಗೆ ಯಹೂದಿಯರ ಮತ್ತೊಂದು ಗೋತ್ರವಾದ ಬನೂ ನಝೀರ್ ಕೂಡ ತಲೆ ಎತ್ತಿತು. ಮೊತ್ತಮೊದಲಾಗಿ ಅವರ ಒಬ್ಬ ಮುಖಂಡನಾದ ಕಅ್‌ಬ್ ಬಿನ್ ಅಶ್ರಫ್ ಒಪ್ಪಂದವನ್ನು ಮುರಿದು ಖುರೈಶಿಯರು ಮತ್ತು ಇತರ ಗೋತ್ರಗಳ ಜೊತೆಗೆ ಸೇರಿಕೊಂಡು ಮುಸ್ಲಿಮರ ವಿರುದ್ಧ ಷಡ್ಯಂತ್ರ ಮಾಡಲು ಆರಂಭಿಸಿದರು ಮತ್ತು ಕೊನೆಗೆ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ತಂತ್ರ ಹೂಡಿದರು. ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಆ ವ್ಯಕ್ತಿ ತನ್ನ ದುರ್ಗತಿಗೆ ತಲುಪಿದಾಗ ಆತನ ಗೋತ್ರದವರು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಯೋಜನೆ ಹಾಕಿದರು. ಅವರ ಭಯಾನಕ ಉದ್ದೇಶಗಳು ತಿಳಿದುಬಂದಾಗ ಅವರಿಗೆ ಮುನ್ನೆಚ್ಚರಿಕೆ ನೀಡುವ ಮತ್ತು ಶಿಕ್ಷೆ ನೀಡುವ ವಿಧಾನವನ್ನು ಅವಲಂಬಿಸಿದಾಗ ಅವರು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ತಯಾರಾದರು. ಈ ಯುದ್ಧದಲ್ಲಿ ಬನೂ ಖುರೈಝ್ ಅವರಿಗೆ ನೆರವಾಯಿತು. ಬನೂ ನಝೀರ್ ಗೋತ್ರ ಪರಾಜಿತಗೊಂಡಾಗ ಹಝ್ರತ್ ಪೈಗಂಬರ್(ಸ) ಬನೂ ಖುರೈಝ್ ಗೋತ್ರವನ್ನು ಪೂರ್ಣವಾಗಿ ಕ್ಷಮಿಸಿದರು ಮತ್ತು ಬನೂ ನಝೀರಿಗೆ ಮದೀನದಿಂದ ಶಾಂತಿ ಮತ್ತು ನೆಮ್ಮದಿಯಿಂದ ಹೊರಗೆ ಹೋಗಲು ಅನುಮತಿ ಕೊಟ್ಟರು. ಈ ಔದಾರ್ಯಕ್ಕೆ ಪ್ರತಿಯಾಗಿ ಬನೂ ನಝೀರ್ ಮಾಡಿದ್ದೇನು? ಮದೀನದಿಂದ ಹೊರಗೆ ಹೋಗಿ ಅರೇಬಿಯದ ವಿವಿಧ ಗೋತ್ರಗಳ ಜೊತೆಗೆ ಸೇರಿಕೊಂಡು ಒಂದು ದೊಡ್ಡ ಸೇನೆಯೊಂದಿಗೆ ಮದೀನದ ಮೇಲೆ ಆಕ್ರಮಣ ನಡೆಸಲು ಬಂದರು ಮತ್ತು ಇಸ್ಲಾಂ ಧರ್ಮವನ್ನು ಸರ್ವನಾಶ ಮಾಡುವ ತನಕ ಮರಳಿ ಬರಲಾರೆವು ಎಂದು ಎಲ್ಲರಿಂದ ಪ್ರತಿಜ್ಞೆ ಪಡೆದರು. ಯುದ್ಧದ ಯಾವುದೇ ಸಾಧನ ಸಾಮಗ್ರಿಗಳು ಇಲ್ಲದೇ ಮತ್ತು ಅತ್ಯಂತ ಬಲಹೀನ ಸ್ಥಿತಿಯಲ್ಲಿದ್ದ ಮುಸ್ಲಿಮರನ್ನು ಸತ್ಯನಿಷೇಧಿಗಳ ಹತ್ತು ಹದಿನೈದು ಸಾವಿರ ಶಕ್ತಿಶಾಲಿ ಮತ್ತು ಅಪಾಯಕಾರಿ ಸೈನಿಕರು ಸುತ್ತುವರೆದು ನಿಂತಿದ್ದಾಗ ಮತ್ತು ಮೃತ್ಯುವನ್ನು ಮುಸ್ಲಿಮರು ಕಣ್ಣಾರೆ ಕಾಣುತ್ತಿದ್ದ ಇಂತಹ ಭಯಾನಕ ಸಮಯದಲ್ಲಿ ಯಹೂದಿಯರ ಮೂರನೇ ಗೋತ್ರವಾದ ಬನೂ ಖುರೈಝ್ ಮೋಸ ಮಾಡಿತು. ಬನೂ ಖುರೈಝ್ ಗೋತ್ರದವರು ಮುಸ್ಲಿಮ್ ಮಹಿಳೆಯರು ಮತ್ತು ಮಕ್ಕಳ ಮೇಲೆ ಹಿಂದಿನಿಂದ ದಾಳಿ ನಡೆಸಲು ಆರಂಭಿಸಿದರು. ಬನೂ ಖುರೈಝ್ದದ ಈ ಕೃತ್ಯ ಪ್ರತಿಜ್ಞೆಯ ಉಲ್ಲಂಘನೆ ಮಾತ್ರವಾಗಿರಲಿಲ್ಲ. ಬದಲಾಗಿ ಒಂದು ಅಪಾಯಕಾರಿ ವಿದ್ರೋಹವಾಗಿತ್ತು.

ಇಂತಹ ಸ್ಥಿತಿಯಲ್ಲಿ ಅವರ ಪ್ರತಿಜ್ಞೆ ಉಲ್ಲಂಘನೆ, ಮೋಸಗಾರಿಕೆ, ವಿದ್ರೋಹ ಮತ್ತು ಜನರನ್ನು ಕೊಲ್ಲಲು ತೆಗೆದ ಕ್ರಮಗಳ ಅಪರಾಧಕ್ಕೆ ಅವರಿಗೆ ನೀಡಲಾದ ಈ ಶಿಕ್ಷೆಯಲ್ಲದೇ ಬೇರೆ ಯಾವ ಮಾರ್ಗವಿತ್ತು? ಮೂರು ವಿಧಗಳ ಶಿಕ್ಷೆಗಳು ಮಾತ್ರವೇ ಅವರಿಗೆ ನೀಡಲು ಸಾಧ್ಯತೆಯಿತ್ತು ಎಂಬುದು ಸ್ಪಷ್ಟ. ಒಂದು ಮದೀನದಲ್ಲೇ ಬಂಧಿಸುವುದು, ಎರಡು ಗಡಿಪಾರು ಮಾಡುವುದು, ಮೂರನೆಯದಾಗಿ ಯುದ್ಧ ಮಾಡಿದವರನ್ನು ವಧಿಸುವುದು ಮತ್ತು ಉಳಿದವರನ್ನು ಬಂಧಿಸುವುದು. ಮೊದಲ ರೀತಿಯ ಶಿಕ್ಷೆಯಲ್ಲಿ ಒಂದು ಶತ್ರು ಸಮುದಾಯವನ್ನು ತಮ್ಮ ಪಟ್ಟಣದಲ್ಲಿ ಬಂಧಿಸಿಡುವುದು ಆ ಕಾಲದ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿಯೂ ಅಸಾಧ್ಯವಾಗಿತ್ತು. ಏಕೆಂದರೆ ಇದರಿಂದ ಪಿತೂರಿ, ಗಲಭೆ ಮತ್ತು ರಹಸ್ಯ ಕುತಂತ್ರಗಳನ್ನು ಮಾಡುತ್ತಿದ್ದವರಿಗೆ ಮೊದಲು ಇದ್ದ ಅದೇ ಸ್ವಾತಂತ್ರ್ಯ ಲಭಿಸಿದಂತೆ ಆಗುತ್ತಿತ್ತು. ಮಾತ್ರವಲ್ಲ ಅವರ ಖರ್ಚಿನ ಹೊಣೆಗಾರಿಕೆ ಮುಸ್ಲಿಮರ ಮೇಲೆ ಬರುತ್ತಿತ್ತು. ಖರ್ಚಿನ ಹೊರೆಯನ್ನು ಎತ್ತಲು ಮುಸ್ಲಿಮರಿಗೆ ಖಂಡಿತವಾಗಿಯೂ ಶಕ್ತಿಯಿರಲಿಲ್ಲ. ಎರಡನೇ ಶಿಕ್ಷೆಯಾದ ಗಡಿಪಾರು ಮಾಡುವುದು ಎಂದರೆ ಯಹೂದಿಯರನ್ನು ಮದೀನದಿಂದ ಹೊರಗೆ ಹೋಗಲು ಅನುಮತಿ ಕೊಡುವುದು ಎಂಬುದು ಇಸ್ಲಾಮಿನ ವಿರುದ್ಧ ಹೋರಾಡುವವರ ಸಂಖ್ಯೆಯಲ್ಲಿ ವರ್ಧನೆ ಉಂಟುಮಾಡುವುದಕ್ಕೆ ಸಮವಾಗಿದೆ. ಮಾತ್ರವಲ್ಲ ಇದರಿಂದ ಅತ್ಯಂತ ಅಪಾಯಕರ ಪ್ರಚೋದನೆಗಳು, ಹಗೆತನದ ಪ್ರಚಾರಗಳು ಮತ್ತು ರಹಸ್ಯ ಹಾಗೂ ಕುತಂತ್ರ ಕೆಲಸಗಳ ಕಾರಣದಿಂದ ಇಸ್ಲಾಮಿನ ವಿರುದ್ಧದ ಪ್ರತಿಯೊಂದು ಯೋಜನೆಗಳಿಗೆ ನಾಯಕರಾಗಲು ಉತ್ಸುಕರಾಗಿದ್ದ ಜನರು ಇಸ್ಲಾಮಿನ ವಿರೋಧಿಗಳ ಪಂಕ್ತಿಯಲ್ಲಿ ಬಂದು ಸೇರಿದಂತೆ ಆಗುತ್ತಿತ್ತು. ಆ ಕಾಲದ ಸ್ಥಿತಿಗತಿಗಳ ದೃಷ್ಟಿಯಲ್ಲಿ ಮುಸ್ಲಿಮರು ಹೀಗೆ ಮಾಡಿದ್ದರೆ ಆತ್ಮಹತ್ಯೆಗೆ ಸಮವಾಗುತ್ತಿತ್ತು. ಶತ್ರುಗಳನ್ನು ಜೀವಂತವಾಗಿರಿಸಲು ಸ್ವತಃ ಆತ್ಮಹತ್ಯೆ ಮಾಡಲು ಸಿದ್ಧರಾಗಿರುವ ಯಾವುದಾದರೂ ಸಮುದಾಯ ಭೂಲೋಕದಲ್ಲಿ ಇದೆಯೇ? ಇಲ್ಲವೆಂದಾದರೆ ಖಂಡಿತವಾಗಿಯೂ ಈ ಕಾರಣದಿಂದ ಮುಸ್ಲಿಮರನ್ನು ಆಕ್ಷೇಪಾರ್ಹವೆಂದು ಭಾವಿಸಲು ಸಾಧ್ಯವಲ್ಲ. ಒಟ್ಟಿನಲ್ಲಿ ಈ ಎರಡೂ ಶಿಕ್ಷೆಗಳನ್ನು ಕೊಡುವುದು ಅಸಾಧ್ಯವಾಗಿತ್ತು. ಅವುಗಳಲ್ಲಿ ಯಾವುದನ್ನು ಆಯ್ಕೆ ಮಾಡುವುದಾದರೂ

ಖಂಡಿತವಾಗಿಯೂ ತಮ್ಮನ್ನು ತಾವೇ ನಾಶಕ್ಕೆ ಈಡು ಮಾಡಿದಂತಾಗುತ್ತಿತ್ತು. ಈ ಎರಡು ಶಿಕ್ಷೆಗಳನ್ನು ಬಿಟ್ಟು ಕೈಗೊಳ್ಳಲಾದ ಮೂರನೇ ಮಾರ್ಗವೇ ಉಳಿದಿತ್ತು. ಇದೇ ಕಾರಣದಿಂದ ಸಅದ್(ರ)ರ ತೀರ್ಪು ಸ್ಥಿತಿಗತಿಗಳ ನಿರ್ಬಂಧಿತಾವಸ್ಥೆಯಲ್ಲಿ ಮಾಡಲಾಗಿತ್ತು ಮತ್ತು ಇದಲ್ಲದೇ ಬೇರೆ ಮಾರ್ಗವಿದ್ದಿರಲಿಲ್ಲವೆಂದು ಇದರ ಬಗ್ಗೆ ಇಸ್ಲಾಮಿನ ಶತ್ರುವಾದ ಚರಿತ್ರೆಗಾರ ಮಾರ್ಗೋಲೀಸ್ ಕೂಡ ಸಮ್ಮತಿಸಲು ನಿರ್ಬಂಧಿತನಾಗಿದ್ದನು.

ಹಝ್ರತ್ ಪೈಗಂಬರ್(ಸ)ರ ಮತ್ತು ಯಹೂದಿಯರ ನಡುವೆ ಇದ್ದ ಒಪ್ಪಂದದ ಒಂದು ನಿಬಂಧನೆ ಇದು ಕೂಡ ಆಗಿತ್ತು. ಎಂದರೆ, ಯಹೂದಿಯರಿಗೆ ಸಂಬಂಧಿಸಿ ಯಾವುದಾದರೂ ವಿಷಯವನ್ನು ಬಗೆಹರಿಸಲು ಇದ್ದರೆ ಅದರ ತೀರ್ಪು ಸ್ವತಃ ಅವರದೇ ಶರೀಅತಿನ ಪ್ರಕಾರ ಮಾಡಲಾಗುವುದು ಎಂದಾಗಿತ್ತು. ತೌರಾತನ್ನು ನೋಡುವುದಾದರೆ ಗೊತ್ತಾಗುವುದೇನೆಂದರೆ, ಸಅದ್ ಬಿನ್ ಮುಆದ್ ಬನೂ ಖುರೈಝ್ವದ ಮೇಲೆ ಜಾರಿಗೊಳಿಸಿದ ಅದೇ ಶಿಕ್ಷೆಯನ್ನು ಬನೂ ಖುರೈಝ್ವ ಮಾಡಿದಂತಹ ಅಪರಾಧಗಳಿಗೆ ಶಿಕ್ಷೆಯಾಗಿ ಅದರಲ್ಲಿ ಬರೆಯಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಅದ್(ರ)ರ ತೀರ್ಪು ಕಠಿಣವಾಗಿತ್ತು ಎಂದು ಭಾವಿಸುವುದಾದರೂ ಅದು ಖಂಡಿತವಾಗಿಯೂ ನೀತಿ ನ್ಯಾಯಕ್ಕೆ ವಿರುದ್ಧವಾಗಿರಲಿಲ್ಲ. ಮಾತ್ರವಲ್ಲ ಈ ತೀರ್ಪು ಪೂರ್ಣವಾಗಿಯೂ ಯಹೂದಿಯರ ಶರೀಅತಿಗೆ ಅನುಸಾರವಾಗಿತ್ತು.

ಏನಿದ್ದರೂ ಈ ತೀರ್ಪು ಸಅದ್ ಬಿನ್ ಮುಆದ್(ರ)ರದ್ದಾಗಿತ್ತು. ಹಝ್ರತ್ ಪೈಗಂಬರ್(ಸ)ರದ್ದು ಆಗಿರಲಿಲ್ಲ. ಈ ತೀರ್ಪನ್ನು ತಮ್ಮ ಆಡಳಿತದ ಅಧೀನದಲ್ಲಿ ಜಾರಿಗೊಳಿಸುವ ಅಧಿಕಾರಿ ಎಂಬ ನೆಲೆಯಲ್ಲಿ ಮಾತ್ರ ಹಝ್ರತ್ ಪೈಗಂಬರ್(ಸ)ರಿಗೆ ಇದರೊಂದಿಗೆ ಸಂಬಂಧವಿದ್ದಿತ್ತು. ಹಝ್ರತ್ ಪೈಗಂಬರ್(ಸ) ಅದನ್ನು ಎಂತಹ ರೀತಿಯಲ್ಲಿ ಜಾರಿಗೊಳಿಸಿದರು ಎಂದರೆ ಈಗಿನ ಅತ್ಯಂತ ಸುಸಂಸ್ಕೃತ ಮತ್ತು ಅತ್ಯಂತ ಕೃಪಾಳು ಸರ್ಕಾರ ಕೂಡ ಅದನ್ನು ಅತ್ಯುತ್ತಮ ಮಾದರಿಯೆಂದು ಭಾವಿಸಬಹುದಾಗಿದೆ.

ಇಸ್ಲಾಮಿನ ವಿರುದ್ಧ ಆಕ್ಷೇಪವೆತ್ತುವ ಇಂದಿನ ಜನರಿಗೆ ಇರುವ ಉತ್ತರ ಇದಾಗಿದೆ. ಈ ಆಕ್ಷೇಪಗಳ ಕಾರಣದಿಂದ ನಮ್ಮ ಕೆಲವು ಜನರು ಕೂಡ ಪ್ರಭಾವಿತರಾಗುತ್ತಾರೆ. ಬನೂ ಖುರೈಝ್ವದ ಘಟನೆಯನ್ನು ಮುಂದಿರಿಸಿ ಪೆಲಸ್ತೀನಿಯರ ವಿರುದ್ಧ ಮಾಡಲಾಗುವ ಕೃತ್ಯಗಳು ಕೂಡ ಅನುಮತನೀಯವೆಂದು ಹೇಳುತ್ತಾರೆ. ಆದರೆ ಇಂದಿನ ಸ್ಥಿತಿಗತಿಗಳಿಗೆ ಅಂದಿನ ಆ ಸ್ಥಿತಿಯೊಂದಿಗೆ ಯಾವುದೇ ಹೋಲಿಕೆಯೇ ಇಲ್ಲ. ಹೇಗಿದ್ದರೂ ಈ ಎಲ್ಲ ತಪ್ಪುಗಳು ಮುಸ್ಲಿಮರದ್ದೇ ಆಗಿದೆ. ಅವರು ತಮ್ಮ ಸ್ವಾರ್ಥ ಕೆಲಸಗಳಿಗಾಗಿ ಇಸ್ಲಾಮಿನ ಗೌರವವನ್ನು ಕೊನೆಗೊಳಿಸಿರುವರು. ಅಲ್ಲಾಹನು ಅವರಿಗೂ ಬುದ್ಧಿ ನೀಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهُ وَنَسْتَعِيْنُهُ وَنَسْتَغْفِرُهُ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***
At, ***'Masjid Mubarak'***, *Islamabad, Tilford,* U.K. On 01-11-2024
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email****: khutuba.kannada@gmail.com*
**You can find all the Sermons archived at**: www.alislam.org/friday-sermon